ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಶ್ರೀರಂಗಪಟ್ಟಣ

**ಸಿಸಿ 38/2018 ಸಿಡಬ್ಲ್ಯೂ: 17 ಪಿ ಡಬ್ಲ್ಯೂ: 8**

| | |
|---|---|
| ಹೆಸರು | ಸೋಮಶೇಖರಮೂರ್ತಿ ಎಲ್. ಸಿ . |
| ತಂದೆಯ ಹೆಸರು | ಚನ್ನವೀರಗೌಡ |
| ವಯಸ್ಸು | 58 ವರ್ಷ |
| ವೃತ್ತಿ | Assistant Traffic Inspector, Mandya |
| ವಾಸ | ಮಂಡ್ಯ |

ದಿನಾಂಕಃ 13.01.2025 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ

1. ನಾನು 2014 ರಿಂದ 2021 ರವರೆಗೂ ಶ್ರೀರಂಗಪಟ್ಟಣದ ಬಸ್ ಸ್ಟ್ಯಾಂಡ್ ನಲ್ಲಿ ಟ್ರಾಫಿಕ್ ಕಂಟ್ರೋಲರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯ ನಮ್ಮ ಕೆ ಎಸ್ ಆರ್ ಟಿ ಸಿ ಬಸ್ ಕೆಎ-40-ಎಫ್ -1054 ರ ಚಾಲಕನಾಗಿದ್ದರು.
2. ದಿಃ 15.01.2018 ರಂದು ನಮ್ಮ ಘಟನಾ ವ್ಯವಸ್ಥಾಪಕರು ಅಪಘಾತದ ವಿಷಯವನ್ನು ತಿಳಿಸಿರುತ್ತಾರೆ. ಅಪಘಾತವು ಮೈಸೂರು- ಬೆಂಗಳೂರು ರಸ್ತೆಯಲ್ಲಿ ಆಗಿದೆ ಎಂದು ನಮ್ಮ ಘಟನಾ ವ್ಯವಸ್ಥಾಪಕರು ತಿಳಿಸಿದ್ದು, ನಾನು ಅಲ್ಲಿ ಹೋಗಿ ನೋಡಿದಾಗ ಯಾವುದೇ ಅಪಘಾತದ ಕುರುಹು ಇರುವುದಿಲ್ಲ. ಪೊಲೀಸರು ಘಟನೆಯ ಬಗ್ಗೆ ನಮಗೆ ತಿಳಿಸಿ ಬಸ್ ಅನ್ನು ಹಾಜರುಪಡಿಸಲು ನಿರ್ದೇಶಿಸಿದ್ದರು. ಆ ಪ್ರಕಾರ ಬಸ್ಸನ್ನು ಹಾಜರುಪಡಿಸಿರುತ್ತೇನೆ. ಅಪಘಾತವು ನಮ್ಮ ಬಸ್ ನಿಂದಲೇ ಆಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಠಾಣೆಯಿಂದ ಸಂಬಂಧಪಟ್ಟ ದಾಖಲಾತಿಗಳನ್ನು ನೀಡಿ ಬಸ್ಸನ್ನು ಬಿಡಿಸಿಕೊಂಡಿರುತ್ತೇನೆ. ಸಾಕ್ಷಿ ನಿಪಿ 19 ಅನ್ನು

ನೋಡಿ ತಮ್ಮ ಸಹಿಗಳನ್ನು ಗುರುತಿಸಿದ್ದು, ಅದನ್ನು 19(ಬಿ) ಎಂದು ಗುರುತಿಸಲಾಗಿದೆ. ಸಾಕ್ಷಿ ನಿಪಿ 16 ರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು 16(ಬಿ) ಎಂದು ಗುರುತಿಸಲಾಗಿದೆ. ಸಾಕ್ಷಿ ನಿಪಿ 17 ರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು 17(ಬಿ) ಎಂದು ಗುರುತಿಸಲಾಗಿದೆ. ಸಾಕ್ಷಿ ಪೊಲೀಸ್ ನೋಟೀಸ್ ನೀಡಿದ ಮರುಉತ್ತರವನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ 21 ಎಂದು ಸಾಕ್ಷಿಯ ಸಹಿಯನ್ನು 21(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ನಿಪಿ 5 ಅನ್ನು ನೋಡಿ ತಮ್ಮ ಇರುವಿಕೆ ಹಾಗೂ ತಾವು ಬಿಡಿಸಿಕೊಂಡ ಬಸ್ ಅದೇ ಎಂದು ಗುರುತಿಸಿರುತ್ತಾರೆ.

ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎ ಪಿ ಪಿರವರು ಅನುಮತಿ ಕೋರುತ್ತಿದ್ದು, ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.

ಪಾಟೀ ಸವಾಲುಃ ಎ ಪಿ ಪಿ ರವರಿಂದಃ

3. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯು ಕೆ ಎಸ್ ಆರ್ ಟಿ ಸಿ ಬಸ್ ಕೆಎ-40-ಎಫ್ -1054 ಅನ್ನು ಮೈಸೂರಿನಿಂದ ಶ್ರೀರಂಗಪಟ್ಟಣದ ಕಡೆಗೆ ಅತಿವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮುಂದೆ ಹೋಗುತ್ತಿದ್ದ ಟಿ ವಿ ಎಸ್ ಎಕ್ಸೆಲ್ ಮೊಪೆಡ್ ಗೆ ಅಪಘಾತಪಡಿಸಿರುತ್ತಾರೆ ಎಂಬ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಅಪಘಾತವು ಆರೋಪಿ ಚಲಾಯಿಸುತ್ತಿದ್ದ ಬಸ್ ನಿಂದ ಆಗಿಲ್ಲ ಎಂದು ನುಡಿಯುತ್ತಾರೆ. ಅಪಘಾತಪಡಿಸಿದ ನಂತರ ದ್ವಿ ಚಕ್ರ ವಾಹನದಲ್ಲಿ ಕುಳಿತಿದ್ದ ಚಾಸಾ 1 ಮತ್ತು ಹಿಂಬದಿಯಲ್ಲಿ ಕುಳಿತ ಆತನ ಹೆಂಡತಿ ಬೈಕ್ ಸಮೇತ ಕೆಳಗೆ ಬಿದ್ದು, ಚಾಸಾ 1 ರವರ ಹೆಂಡತಿಯ ಮೇಲೆ ಬಸ್ ನ ಚಕ್ರ ಹರಿದು ತಲೆ ಮೆದುಳು ಹೊರಗೆ ಬಂದು ಆಕೆ ಮೃತ ಪಟ್ಟಿದ್ದು, ಚಾಸಾ 1ರವರ ಕೈ ಕಾಲುಗಳಿಗೂ ಪೆಟ್ಟಾಗಿದ್ದು, ಆತನ ಬೈಕ್ ಸಹ ಜಖಂ ಆಗಿದ್ದು,

ಆರೋಪಿಯು ಬಸ್ ಅನ್ನು ನಿಲ್ಲಿಸದೇ ಹೊರಟು ಹೋಗಿರುವ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯು ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದು, ಆತನ ಪರಿಚಯವಿದ್ದು, ಆತನಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಎನ್ ವಿ ಆರ್ ವಕೀಲರಿಂದಃ

ಅಪಘಾತವು ಆರೋಪಿಯ ತಪ್ಪಿನಿಂದ ಆಗಿಲ್ಲ ಎಂಬ ಬಗ್ಗೆ ದೂರನ್ನು ಆರೋಪಿ ನೀಡಿರುವ ಬಗ್ಗೆ ನನಗೆ ತಿಳಿದಿರುತ್ತದೆ ಎಂದರೆ ಸರಿ. ಐ ಎಂ ವಿ ಮಾಡುವಾಗ ಬೈಕ್ ಮತ್ತು ಬಸ್ ನ ಪೊಟೋ ತೆಗೆಸಿರುತ್ತಾರೆ ಎಂದರೆ ಸರಿ. ವಿ ಟಿ ಎಂ ಮಷಿನ್ ಪ್ರಕಾರ ಬಸ್ 7.20 ಗಂಟೆಗೆ ಗೌಡಹಳ್ಳಿ ಗೇಟಿನ ಮುಂಭಾಗದಲ್ಲಿ ಹೋಗುತ್ತಿತ್ತು ಎಂಬ ವಿಚಾರ ನನಗೆ ತಿಳಿದಿದೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

*ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.*

*ಓ ಹೇ ಕೆ ಸ ಇ ಒ*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು*

*ಶ್ರೀರಂಗಪಟ್ಟಣ.*